
ಮೇಲೆ ಪ್ರಪಂಚ ಸುತ್ತುವ ಆಸೆ ಚಿಗುರಿತು. ವಿಶ್ವದ ಪ್ರಮುಖ ವನ್ಯಜೀವಿಗಳ ವಾಸಸ್ಥಾನಗಳಿಗೆ ತೆರಳಿ, ಅಲ್ಲಿರುವ ವನ್ಯಜೀವಿಗಳನ್ನು ಸೆರೆಹಿಡಿಯುವ ಅದಮ್ಯ ಬಯಕೆ ಉಂಟಾಯಿತು. ಅದಕ್ಕಾಗಿ ಪ್ರಪಂಚದ ಹಲವು ರಾಷ್ಟ್ರಗಳನ್ನು ಸುತ್ತಿದರು. ಮಹಾನಗರಗಳನ್ನು ನೋಡುವ ಬಯಕೆಯೇ ಇಲ್ಲದ ಇವರು ಹುಡುಕಿದ್ದು ಕಾಡುಗಳನ್ನು ಮತ್ತು ವನ್ಯಜೀವಿಗಳನ್ನು. ಅದು ಬತ್ತದ ಪ್ರೀತಿ. ಕೊನೆಯಿಲ್ಲದ ಕಾಳಜಿ.

ಕೀನ್ಯಾ, ತಾಂಜೇನಿಯಾ, ಬ್ರೆಜಿಲ್ (ದಕ್ಷಿಣ ಅಮೆರಿಕ), ಆರ್ಕ್‌ಟಿಕ್ (ರಷ್ಯಾ), ಮಸಾಯ್ ಮರ (ಆಫ್ರಿಕಾ) ಸ್ವಾಲ್ಬಾರ್ಡ್ (ನಾರ್ವೆ), ಫಿನ್ಲೆಂಡ್, ಕೀನ್ಯಾದ ಆಂಬೊಸೆಲಿ (Amboseli) ಮೊದಲಾದ ವಿಶ್ವದ ಪ್ರಮುಖ ವನ್ಯತಾಣಗಳಿಗೆ ಭೇಟಿ ಕೊಟ್ಟು ಅತ್ಯುತ್ತಮ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ವಿಶಿಷ್ಟವಾದ ಮತ್ತು ಅಷ್ಟೇ ಅಪಾಯಕಾರಿ ಪ್ರಾಣಿಗಳಾದ ಧ್ರುವ ಕರಡಿ (ಹಿಮಕರಡಿ – Polar Bear) ಮತ್ತು ಕಂದು ಕರಡಿ (Brown Bear) ಛಾಯಾಚಿತ್ರಗಳನ್ನು ತೆರೆದಿರುವುದು ಅವರ ಛಾಯಾಗ್ರಹಣ ಯಾನದ ಅಪೂರ್ವ ಕ್ಷಣಗಳು.

ಉತ್ತರಧ್ರುವದಲ್ಲಿ ಇರುವ ಆರ್ಕಟಿಕ್ ಪ್ರದೇಶ ಧ್ರುವ ಕರಡಿಗಳ ಮೂಲ ನೆಲೆ. ಧ್ರುವ ಕರಡಿ ಅಳಿವಿನಂಚಿಗೆ ಸಾಗುತ್ತಿರುವ ವಿಶ್ವದ ಅತ್ಯಂತ ದೊಡ್ಡ ನೆಲವಾಸಿ ಮಾಂಸಾಹಾರಿ ಪ್ರಾಣಿ. ಆರ್ಕಟಿಕ್ ಪ್ರದೇಶಗಳಲ್ಲಿ ಮಾತ್ರ ಅದು ಕಾಣಸಿಗುತ್ತದೆ. ಮೋಹನ್ ಅವರು ಅಲ್ಲಿಗೆ ಭೇಟಿ ಕೊಟ್ಟಾಗ, ಆಹಾರವಿಲ್ಲದೆ ಸತ್ತ ಮೂರ್ನಾಲ್ಕು ಹಿಮಕರಡಿಗಳನ್ನು ನೋಡಿದ್ದಾರೆ. 'ಹಿಮಕರಡಿಗಳು ಅವುಗಳ ಆವಾಸಸ್ಥಾನದ ನಷ್ಟದಿಂದ ತೊಂದರೆ ಅನುಭವಿಸುತ್ತಿದ್ದು, ಆಹಾರವಿಲ್ಲದೆ ಸಾಯುವಂತಾಗಿದೆ. ಇದುವರೆಗೂ ನಾನು ತೆಗೆದ ಪ್ರಾಣಿಗಳಲ್ಲಿ ಅತ್ಯಂತ ಅಪಾಯಕಾರಿ ಪ್ರಾಣಿಗಳಲ್ಲಿ ಇದೂ ಒಂದು' ಎನ್ನುತ್ತಾರೆ.

ಪ್ರಪಂಚದ ಬೇರೆ ಬೇರೆ ಪ್ರದೇಶಗಳಿಗೆ ಹೋದಾಗಲೂ ಒಂದೊಂದು ವಿಶಿಷ್ಟ ಅನುಭವ ಅವರಿಗಾಗಿದೆ. ಹಿಮಕರಡಿಗಳ ಹತ್ತಿರದ ಸಂಬಂಧಿಯಾದ ಕಂದು ಕರಡಿ ಕೂಡ ಅತಿದೊಡ್ಡ ನೆಲವಾಸಿ ಪ್ರಾಣಿಗಳಲ್ಲೊಂದು. ವಿಶ್ವದ ಕೆಲವು ಕಡೆ ಮಾತ್ರ ಕಾಣ ಸಿಗುವ ಅವು ಸರ್ವಭಕ್ಷಕ ಪ್ರಾಣಿಗಳು. ಅವುಗಳ ಕೈಯಲ್ಲಿ ಸಿಕ್ಕರೆ ಮುಗಿಯಿತು, ಹಿಂತಿರುಗುವ ಪ್ರಮೇಯವೇ ಇಲ್ಲ.

ಕಂದು ಕರಡಿಯ ಚಿತ್ರ ಸೆರೆಹಿಡಿಯಲು ಮೋಹನ್ ಅವರು ರಷ್ಯಾದ ಕಾಮ್ಚತ್ಕಾಗೆ (Kamchatka) ಹೋಗಲು ಬೆಂಗಳೂರಿನಿಂದ ದುಬೈ, ದುಬೈನಿಂದ ಮಾಸ್ಕೋ, ಮಾಸ್ಕೋದಿಂದ ಒಂದು ದೇಶೀಯ ವಿಮಾನದಲ್ಲಿ ಹೋಗಬೇಕಾಗಿತ್ತು. ದೇಶೀಯ ವಿಮಾನದಲ್ಲಿ ಜೀವಮಾನದಲ್ಲಿ ಅಷ್ಟು ದೀರ್ಘ ಪ್ರಯಾಣ ಮಾಡಿದ್ದು ಅದೇ ಮೊದಲು. ಮಾಸ್ಕೋದಿಂದ ಅವರು ಮತ್ತು ಸಹ ಪ್ರಯಾಣಿಕರನ್ನು ಹೆಲಿಕಾಪ್ಟರೊಂದರಲ್ಲಿ ಕಾಡಿನ ಮಧ್ಯದ ದ್ವೀಪವೊಂದಕ್ಕೆ ತಂದು ಬಿಡಲಾಗಿತ್ತು. ಕಾಮ್ಚತ್ಕಾ ಸರೋವರಕ್ಕೆ ಹತ್ತಿರವಿದ್ದ ಪರ್ಯಾಯ ದ್ವೀಪವೊಂದರಲ್ಲಿ ಒಟ್ಟು ಐದು ದಿನಗಳ ವಾಸ.



ಬ್ರೆಜಿಲ್‌ನ ಟೂಕಾನ್‌ನಲ್ಲಿ ಪೋಸ್ ನೀಡಿದ ಟೂಕಾನ್

ಅವರನ್ನೆಲ್ಲ ಅಲ್ಲಿಗೆ ಕರೆದು ತಂದವರು ಮತ್ತೆ ಅಲ್ಲಿಗೆ ಬರುವುದು ಐದಾರು ದಿನಗಳ ನಂತರವೇ ಎಂದಾಗಿತ್ತು. 'ಅಂತಹ ಜಾಗವನ್ನು ಜೀವನದಲ್ಲಿ ಒಮ್ಮೆಯಾದರು ನೋಡಲೇಬೇಕು' ಎಂದು ಉದ್ಗರಿಸುವ ಮೋಹನ್ ಅವರಿಗೆ, ಅಂದು ಆ ಜಾಗದಿಂದ ಹೆಲಿಕಾಪ್ಟರಿನಲ್ಲಿ ರಷ್ಯಾಗೆ ಮರಳುವಾಗ ಕಣ್ಣು ತುಂಬಿಕೊಂಡಿದ್ದವಂತೆ.

ಉತ್ತರ ಯೂರೋಪಿಯನ್ ರಾಷ್ಟ್ರವಾದ ಫಿನ್ಲೆಂಡ್‌ನ ಅರಣ್ಯ ಪ್ರದೇಶವೊಂದರಲ್ಲಿ ಏಳು ದಿನಗಳ ಕಾಲ ನೆಲೆಸಿ, ವೋಲ್ವೊರಿನ್ (Wolverine) ಎನ್ನುವ ಕರಡಿ ಜಾತಿಗೆ ಸೇರಿದ ಪ್ರಾಣಿಯ ಚಿತ್ರ ಸೆರೆಹಿಡಿದ್ದಾರೆ. ಅದು ಗಾತ್ರದಲ್ಲಿ ಚಿಕ್ಕದಾದರೂ ಬಲಯುತ ಮಾಂಸಖಂಡಗಳುಳ್ಳ ಪ್ರಾಣಿ. ಭೂಮಿಯಲ್ಲಿ ವಾಸ ಮಾಡುವ ಅತಿದೊಡ್ಡ ಹೊಟ್ಟೆಬಾಕ ಪ್ರಾಣಿ.

ದಕ್ಷಿಣ ಅಮೆರಿಕದ ಬ್ರೆಜಿಲ್‌ನಲ್ಲಿ ಜಾಗ್ವಾರ್ (ಒಂದು ಬಗೆಯ ಚಿರತೆ) ಚಿತ್ರ ಸೆರೆಹಿಡಿಯಲು ಹೋದಾಗ ಅವರನ್ನು ಸಣ್ಣ ಬೋಟುಗಳಲ್ಲಿ ಕರೆದೊಯ್ಯಲಾಗಿತ್ತು. ಅಲ್ಲಿನ ಸರೋವರದಲ್ಲಿ 'ಫಿರಾನಾ'ಗಳು ಕಾಣಸಿಗುತ್ತವೆ. ಫಿರಾನಾ ಅತ್ಯಂತ ಅಪಾಯಕಾರಿಯಾದ ವಿಷಕಾರಿ ಮೀನು. ಮನುಷ್ಯರೇನಾದರೂ ನೀರೊಳಗೆ ಬಿದ್ದು ಅವುಗಳ ಹಲ್ಲಿಗೆ ಸಿಕ್ಕರೆ ಮುಗಿಯಿತು, ಐದೇ ನಿಮಿಷದಲ್ಲಿ ಮಾಂಸವೆಲ್ಲ ಕರಗಿ ಅಸ್ಥಿಪಂಜರ ಆಗಿಬಿಡುತ್ತದೆ.

ವನ್ಯಜೀವಿ ಛಾಯಾಗ್ರಹಣದಲ್ಲಿ ಆಸಕ್ತಿ ಇಟ್ಟುಕೊಂಡಿರುವವರಿಗೆ ಪ್ರತಿಕೂಲ ಪರಿಸ್ಥಿತಿಯನ್ನು ನಿಭಾಯಿಸುವ ಛಾತಿ ಹಾಗೂ ತಾನು ನೋಡಬೇಕೆಂದು ಬಯಸಿದ ಪ್ರಾಣಿ ಅಥವಾ ಪಕ್ಷಿಯನ್ನು ಸೆರೆಹಿಡಿಯುವ ತನ್ಮಯತೆಯಲ್ಲಿ ಅಪಾಯದ ಅರಿವು ಇದ್ದೇ ಇರುತ್ತದೆ. ಆಸಕ್ತಿ, ಕುತೂಹಲದ ಮುಂದೆ ಅಪಾಯ ಗೌಣವಷ್ಟೇ.

## ಸಹಕಾರದ ಗ್ರೂಪ್ ಫೋಟೊ!

ಮೋಹನ್ ಥಾಮಸ್ ಅವರ ತಂದೆ ಎಂ.ಟಿ. ಥಾಮಸ್, ತಾಯಿ ಸೋಸಮ್ಮ. ಇವರ ವಿದ್ಯಾಭ್ಯಾಸ ಬೆಂಗಳೂರಿನ ಎಚ್.ಎ.ಎಲ್.ನ ವಿಮಾನಪುರ ಶಾಲೆಯಲ್ಲಿ ನಡೆದಿತ್ತು. ಸೇಂಟ್ ಅಲೋಷಿಯಸ್



ಫಿನ್ಲೆಂಡ್‌ನಲ್ಲಿ ಫಲಿಸಿತು ಕಂದು ಕರಡಿಯ ಫೋಟೊಶೂಟ್

ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿ, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದರು. ಇದೀಗ ಬಹಳ ವರ್ಷಗಳಿಂದಲೂ ಬೆಂಗಳೂರಿನಲ್ಲಿಯೇ ವಾಸವಾಗಿದ್ದಾರೆ.

'ನನ್ನೆಲ್ಲ ಸಾಧನೆಗೆ ಕುಟುಂಬವೇ ಮುಖ್ಯ ಕಾರಣ. ಕುಟುಂಬದ ಸಹಕಾರ ಇಲ್ಲದಿದ್ದರೆ ಇದೆಲ್ಲ ಸಾಧ್ಯವಾಗುತ್ತಿರಲಿಲ್ಲ' ಎನ್ನುತ್ತಾರೆ ಮೋಹನ್. ಛಾಯಾಗ್ರಹಣದ ಕಾರಣದಿಂದಾಗಿ ಹಲವಾರು ದಿನಗಳ ಕಾಲ ಕಾಡಿನಲ್ಲಿ, ಯಾವುದೇ ಸಂಪರ್ಕ ಇಲ್ಲದೇ ಇರಬೇಕಾದ ಪರಿಸ್ಥಿತಿ ಎದುರಾಗುವುದು ಸಹಜ. ಪ್ರಾರಂಭದ ದಿನಗಳಲ್ಲಿ, ಬಂಡೀಪುರ ಕಾಡಿನಲ್ಲಿ ಹುಲಿಯ ಚಿತ್ರಕ್ಕಾಗಿ ಸುಮಾರು ಒಂದು ತಿಂಗಳು ಇರಬೇಕಾಗಿತ್ತು. ಅಂಥ ಸಂದರ್ಭದಲ್ಲಿ ಕುಟುಂಬದ ಸಹಕಾರ ತುಂಬಾ ಅಗತ್ಯ. ಮಡದಿ

